**ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ವಚನ ಬೋಧಿಸಿದ ದಿನಾಂಕ: 16-11-2022.**

**ಪಾಟೀ ಸವಾಲು - ವಾದಿ ಪರ ವಕೀಲರಿಂದ**

4) ನಾನು ಎಸ್.ಎಸ್.ಎಲ್.ಸಿ. ವರೆಗೆ ಓದಿದ್ದು, ವ್ಯವಸಾಯ ಮಾಡುತ್ತೇನೆ. ವಾದಿ ಎಲ್ಲಿಯವರೆಗೆ ವಿದ್ಯಾಭ್ಯಾಸ ಮಾಡಿದ್ದಾರೆ ಎಂಬ ಬಗ್ಗೆ ನಾನು ನನ್ನ ತಂದೆಯನ್ನು ಕೇಳಿ ತಿಳಿದುಕೊಂಡಿಲ್ಲ. ಈ ದಾವೆಗೆ ಪ್ರತಿವಾದ ಪತ್ರವನ್ನು ಸಲ್ಲಿಸಲು ಯಾರು ಮಾಹಿತಿ ಕೊಟ್ಟರು ಎಂದು ನನಗೆ ಗೊತ್ತಿಲ್ಲ. ವಾದಿಯು ಈ ದಾವೆಯನ್ನು ಜಮೀನು ಬೇಕೆಂದು ಸಲ್ಲಿಸಿದ್ದಾರೆ. ನನ್ನ ತಾತ ಹನುಮಪ್ಪನಿಗೆ ನನ್ನ ತಂದೆ ನಂಜಪ್ಪ ಮತ್ತು ವಾದಿ ಅಶ್ವತಮ್ಮ ಇಬ್ಬರೇ ಮಕ್ಕಳು ಎಂದರೆ ಸರಿ. 2 ರಿಂದ 6 ನೇ ಪ್ರತಿವಾದಿಗಳು ಎಲ್ಲರೂ 1 ನೇ ಪ್ರತಿವಾದಿಯ ಮಕ್ಕಳು ಎಂದರೆ ಸರಿ. ಎಲ್ಲಾ ಎಂಟೂ ದಾವಾ ಸ್ವತ್ತುಳಗಳು ನನ್ನ ತಾತನಿಗೆ ಪಿತ್ರಾರ್ಜಿತವಾಗಿ ಬಂದಿದ್ದವು ಎಂದರೆ ಏಳು ಸ್ವತ್ತುಗಳು ಪಿತ್ರಾರ್ಜಿತವಾಗಿ ಬಂದಿದ್ದವು, ಒಂದನ್ನು ನನ್ನ ತಂದೆ ಸಂಪಾದಿಸಿದ್ದರು. ನನ್ನ ತಂದೆ ಐಟಂ ನಂ.2 ರ ಸರ್ವೆ ನಂ.70-2 ನ್ನು ಖರೀದಿ ಮಾಡಿದ್ದರು. ನನ್ನ ತಂದೆ ಐಟಂ ನಂ.2 ನ್ನು ಖರೀದಿ ಮಾಡಿದ್ದರು ಎಂಬ ರುಜುವಾತಿಗೆ ನಾನು ಯಾವುದೇ ದಾಖಲೆ ಹಾಜರು ಮಾಡಿಲ್ಲ ಎಂದರೆ ಮುಂದೆ ಹಾಜರು ಮಾಡುತ್ತೇನೆ. ದಾವಾ ಸ್ವತ್ತುಗಳ ಎಲ್ಲವೂ ನನ್ನ ತಂದೆ ಹನುಮಪ್ಪನ ಮರಣಾನಂತರ ವಾದಿ ಮತ್ತು ನನ್ನ ತಂದೆಯ ಜಂಟಿ ಸ್ವಾಧೀನದಲ್ಲಿ ಇದ್ದವು ಎಂದರೆ ಸರಿಯಲ್ಲ. ನಾನು ವಾದಿ ಮತ್ತು ನನ್ನ ತಂದೆ ಜಂಟಿ ಸ್ವಾಧೀನದಲ್ಲಿ ಇರಲಿಲ್ಲವೆಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ನನ್ನ ತಾತ ತನ್ನ ಮರಣಕ್ಕೆ ಮುಂಚೆ ಏಳು

ಸ್ವತ್ತುಗಳ ಬಗ್ಗೆ ಯಾವುದೇ ದಸ್ತಾವೇಜನ್ನು ಮಾಡದೇ ತೀರಿಕೊಂಡಿದ್ದರು ಎಂದರೆ ಸರಿ. ವಾದಿಗೆ ಆಕೆಯ ಹಿಸ್ಸೆಯನ್ನು ಸ್ತ್ರೀಧನ ಮತ್ತು ಒಡವೆ ವಸ್ತ್ರಗಳ ರೂಪದಲ್ಲಿ ಕೊಟ್ಟಿರುವ ಬಗ್ಗೆ ಯಾವುದೇ ದಾಖಲೆ ಹಾಜರು ಮಾಡಿಲ್ಲ ಎಂದರೆ ಸರಿ. ವಾದಿಯು ನನ್ನ ತಂದೆ ಹಾಗೂ ಉಳಿದ ಪ್ರತಿವಾದಿಗಳ ಜೊತೆಯಲ್ಲಿ ಒಳ್ಳೆಯ ಸಂಬಂಧವನ್ನೇ ಹೊಂದಿದ್ದರು ಎಂದರೆ ಸರಿ. ನನ್ನ ತಾತ ಬದುಕಿದ್ದಾಗ ಆತನು ವಾದಿಗೆ ದಾವಾ ಸ್ವತ್ತುಗಳಲ್ಲಿ ಪಾಲು ವಿಭಾಗ ಕೊಡುವುದಾಗಿ ಹೇಳಿದ್ದರು ಎಂದರೆ ಸರಿಯಲ್ಲ. ನಂತರ ನನ್ನ ತಂದೆ ಕೂಡ ವಾದಿಗೆ ಪಾಲು ವಿಭಾಗ ಕೊಡುವುದಾಗಿ ಭರವಸೆ ನೀಡಿದ್ದರು, ಅದರ ಬಗ್ಗೆ ನನಗೆ ಗೊತ್ತಿಲ್ಲ ಎಂದರೆ ಸರಿಯಲ್ಲ. ದಾವೆ ಹಾಕಿದ ನಂತರ ವಾದಿ ಮತ್ತು ನನ್ನ ತಂದೆಗೆ ಪಾಲು ವಿಭಾಗದ ವಿಚಾರದಲ್ಲಿ ಜಗಳವಾಗಿತ್ತು ಎಂದರೆ ಸರಿಯಲ್ಲ. ದಾವೆ ಹಾಕಿದ ನಂತರ ವಾದಿಯು ನಮ್ಮ ಮನೆಗೆ ಬರುವುದನ್ನು ನಿಲ್ಲಿಸಿದರು ಎಂದರೆ ಸರಿ.

5) ವಾದಿಯ ಮದುವೆ ರಂಗಪ್ಪನ ಜೊತೆಯಲ್ಲಿ ಯಾವ ವರ್ಷದಲ್ಲಿ ಯಾವ ಸ್ಥಳದಲ್ಲಿ ನಡೆದಿತ್ತು ಎಂದರೆ ನನಗೆ ಗೊತ್ತಿಲ್ಲ. ವಾದಿಯು 65 ವರ್ಷಗಳ ಹಿಂದೆ ಜನಿಸಿದ್ದಾರೆ. ನಾನು ಹುಟ್ಟಿದ ವರ್ಷದಲ್ಲಿ ವಾದಿಯ ಮದುವೆಯಾಗಿತ್ತು. ನನ್ನ ಜನ್ಮ ದಿನಾಂಕ ಏನು ಎಂದರೆ ನನಗೆ ಗೊತ್ತಿಲ್ಲ. ನಾನು ಹೇಳಿದ ಪ್ರಕಾರ ವಾದಿ 65 ವರ್ಷಗಳ ಹಿಂದೆ ಹುಟ್ಟಿರುವ ಕಾರಣ ವಾದಿಯು 1956 ರ ನಂತರ ಜನಿಸಿದ್ದಾರೆ ಎಂದರೆ ನನಗೆ ಸರಿಯಾಗಿ ಗೊತ್ತಿಲ್ಲ. ನನಗೆ ವಾದಿ ಯಾವಾಗ ಜನಿಸಿದರು ಎಂಬ ಬಗ್ಗೆಯಾಗಲೀ ಮತ್ತು ವಾದಿಗೆ ವರೋಪಚಾರವಾಗಿ ಯಾವ ಯಾವ ಒಡವೆಗಳನ್ನು ಕೊಟ್ಟಿದ್ದರೆಂದಾಗಲೀ ಗೊತ್ತಿಲ್ಲವೆಂದರೆ ಒಡವೆ ಕೊಟ್ಟಿದೆ ಎಂದು ಹೇಳಿದ್ದರು,

ವಿವರಗಳು ಗೊತ್ತಿಲ್ಲ. ನಾನು ಈ ವಿಚಾರಗಳ ಬಗ್ಗೆ ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. 5 ಮತ್ತು 6 ನೇ ಪ್ರತಿವಾದಿಗಳಾದ ನನ್ನ ಅಕ್ಕ-ತಂಗಿಯರಿಗೆ ದಾವಾ ಸ್ವತ್ತುಗಳಲ್ಲಿ ಏನಾದರೂ ಭಾಗ ಕೊಡಲಾಗಿದೆಯೇ? ಎಂದರೆ ಇಲ್ಲ.

6) ನನ್ನ ತಾತ ಹನುಮಪ್ಪ ತೀರಿಕೊಂಡ ನಂತರ ಐಟಂ ನಂ.1 ರಿಂದ 8 ರ ಖಾತೆಯನ್ನು ನನ್ನ ತಂದೆ ಪೌತಿ ಖಾತೆ ಮೇರೆಗೆ ತನ್ನ ಹೆಸರಿಗೆ ಬದಲಾಯಿಸಿಕೊಂಡಿದ್ದಾರೆ ಎಂದರೆ ಸರಿಯಲ್ಲ. ನಿ.ಡಿ.1 ರಿಂದ ನಿ.ಡಿ.3 ಹಕ್ಕು ಬದಲಾವಣೆ ದಾಖಲೆಗಳಲ್ಲಿ ಪೌತಿ ಖಾತೆ ಮೇರೆಗೆ ಎಂದು ನಮೂದಾಗಿದೆ ಎಂದರೆ ಸರಿ. 2 ರಿಂದ 6 ನೇ ಪ್ರತಿವಾದಿಗಳ ನಡುವೆ ಯಾವುದೇ ವಿಭಾಗವಾಗಿಲ್ಲ ಎಂದರೆ ಸರಿ. ಆದ್ದರಿಂದ ದಾವಾಸ್ವತ್ತುಗಳಲ್ಲಿ ವಾದಿಯು ಅರ್ಧ ಭಾಗದ ಹಿಸ್ಸೆಗೆ ಹಕ್ಕುದಾರರು ಎಂದರೆ ಇಲ್ಲ, ಈಗಾಗಲೇ ಒಡವೆ ಮತ್ತು ಹಣ ಕೊಟ್ಟಿದ್ದೇವೆ. ಒಡವೆ ಮತ್ತು ಹಣ ಕೊಟ್ಟ ಬಗ್ಗೆ ದಾಖಲೆ ಹಾಜರು ಮಾಡಿಲ್ಲ ಎಂದರೆ ದಾಖಲೆಗಳು ಇಲ್ಲ. ನಿ.ಪಿ.2 ರಂತೆ ಐಟಂ ನಂ.1 ರ ಖಾತೆ ಈಗಲೂ ನನ್ನ ತಾತ ಹನುಮಪ್ಪನ ಹೆಸರಿನಲ್ಲಿ ನಮೂದಾಗುತ್ತಿದೆ ಎಂದರೆ ಹೌದು, ಮ್ಯುಟೇಶನ್‌ನಲ್ಲಿ ಬದಲಾವಣೆ ಆಗಿದೆ. ವಾದಿಗೆ ಹಿಸ್ಸೆ ಕೊಡುವುದನ್ನು ತಪ್ಪಿಸಲಿಕ್ಕೆ ನನ್ನ ತಂದೆ ಮತ್ತು ಎಲ್ಲಾ ಪ್ರತಿವಾದಿಗಳೂ ವಾದಿ 1956 ಕ್ಕಿಂತ ಮುಂಚೆಯೇ ಹುಟ್ಟಿದ್ದಾರೆಂದು ಸುಳ್ಳು ತಕರಾರು ಸಲ್ಲಿಸಿದ್ದೇವೆ ಎಂದರೆ ಸರಿಯಲ್ಲ. ವಾದಿಯು ಎಲ್ಲಾ ದಾವಾ ಸ್ವತ್ತುಗಳಲ್ಲೂ ಅರ್ಧ ಭಾಗದ ಹಿಸ್ಸೆ ಹಕ್ಕು ಹೊಂದಿದ್ದಾರೆ ಎಂದರೆ ಸರಿಯಲ್ಲ. ನಿ.ಡಿ.1 ರಿಂದ ನಿ.ಡಿ.129 ರ ವರೆಗೆ ನಾನು ಕೇವಲ ಪಹಣಿ ಹಾಗೂ ಮ್ಯುಟೇಶನ್ ಗಳನ್ನು ಮಾತ್ರ ಹಾಜರು ಮಾಡಿದ್ದೇನೆ ಎಂದರೆ

ಸರಿ. ನನ್ನ ತಾತ ಮೃತ ಪಟ್ಟ ನಂತರದಿಂದ ಇಲ್ಲಿಯವರೆಗೆ ನಮ್ಮ ಕುಟುಂಬದಲ್ಲಿ ಪಾಲು ವಿಭಾಗ ಆದ ಬಗ್ಗೆ ಯಾವುದೇ ದಾಖಲೆ ಹಾಜರು ಮಾಡಿಲ್ಲ ಎಂದರೆ ನಮ್ಮ ಕುಟುಂಬದಲ್ಲಿ ಪಾಲು ವಿಭಾಗ ನಡೆದಿಲ್ಲ.

ಮರು ವಿಚಾರಣೆ - ಇಲ್ಲಾ.

**(ಉಕ್ತಲೇಖನವನ್ನು ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು).**

**ಓ.ಹೇ.ಕೇ.ಸ.ಇ.ಎ. ಒಪ್ಪಿಕೊಂಡಿರುತ್ತಾರೆ,**

**ಪ್ರಧಾನ ಹಿರಿಯ ಸಿವಿಲ್ ಜಡ್ಜ್ ಮತ್ತು ಜೆ.ಎಂ.ಎಫ್.ಸಿ.,**
**ದೇವನಹಳ್ಳಿ.**